ದೋರಾಣಿಯನ್ನು ಇಂದ್ರ ರಾಜನ ಅರಮನೆಗೆ ಕರೆತಂದು ಇಳಿಸಿತು. ರಾತ್ರಿಯಿಡೀ ಅವಳು ಇಂದ್ರನ ಮುಂದೆ ತನ್ನಂತಹ ಹಲವರು ಸುಂದರಿಯರ ಜೊತೆಗೆ ಹಾಡಿ, ನೃತ್ಯ ಮಾಡಿದಳು. ಬೆಳಗಾಗುವ ಮೊದಲು ಕುರ್ಚಿ ಮೇಲೆ ಕುಳಿತಳು. ರಾಜಕುಮಾರನು ಕುರ್ಚಿಯ ಒಂದು ಕಾಲಿಗೆ ಅಂಟಿಕೊಂಡು ಅವಳೊಂದಿಗೆ ಸುರಕ್ಷಿತವಾಗಿ ಭೂಮಿಗೆ ಬಂದಿಳಿದ. ದೋರಾಣಿ ಅರಮನೆಗೆ ಬಂದಾಗ ತನಗೇನೂ ತಿಳಿಯದ ಹಾಗೆಯೇ ನಡೆದುಕೊಂಡ. ಆದರೆ ಅವಳೊಂದಿಗೆ ರಾಜಕುಮಾರ, 'ನಾನು ನಿನ್ನೆ ರಾತ್ರಿ ಒಂದು ಕುತೂಹಲಕಾರಿ ಕನಸನ್ನು ಕಂಡೆ' ಎಂದು ಹೇಳಿದ.

ದೋರಾಣಿ, 'ಏನು ಕನಸು?' ಕೇಳಿದಳು. ರಾಜಕುಮಾರ, 'ನೀನು ಸಿಂಗರಿಸಿಕೊಂಡು ಒಂದು ಕುರ್ಚಿಯ ಮೇಲೆ ಕುಳಿತು ಇಂದ್ರಸಭೆಗೆ ಹೋಗಿ ಹಾಡುತ್ತ ನೃತ್ಯ ಮಾಡಿದಂತೆ ಕನಸಾಯಿತು' ಎಂದು ಅವಳ ಮುಖ ನೋಡಿದ. 'ಕನಸುಗಳಿಗೇನು ಏನೋ ಒಂದು ನಡೆಯಲಾಗದ ವಿಚಾರ ಅದರಲ್ಲಿರುತ್ತದೆ' ಎಂದಳು ದೋರಾಣಿ. ಅಂದು ರಾತ್ರಿಯೂ ರಾಜಕುಮಾರನು ಅದೃಶ್ಯನಾಗಿ ಅವಳನ್ನು ಹಿಂಬಾಲಿಸಿದನು. ಮೊದಲಿನಂತೆಯೇ ಮತ್ತೆ ಅದೇ ಘಟನೆಗಳು ಸಂಭವಿಸಿದವು. ರಾಜಕುಮಾರ ಮರುದಿನ ಕೂಡ ದೋರಾಣಿಗೆ ಅದೇ ಕನಸಿನ ಕತೆ ಹೇಳಿದ. ಆಗ ದೋರಾಣಿ ಅವನತ್ತ ನೋಡಿದಳು. ಅವಳು 'ನೀನು ಈ ಕನಸು ಕಂಡಿದ್ದು ನಿಜವೇ ಅಥವಾ ನೀನು ನಿಜವಾಗಿಯೂ ಕಂಡಿದ್ದೀಯಾ?' ಕೇಳಿದಳು.

'ನಾನು ನಿಜವಾಗಿಯೂ ಅಲ್ಲಿದ್ದೆ' ಎಂದ ರಾಜಕುಮಾರ. 'ನೀನು ನನ್ನನ್ನು ಏಕೆ ಅನುಸರಿಸಿ ಬಂದೆ?' ಎಂದು ದೋರಾಣಿ ಕೇಳಿದಳು. ಅದಕ್ಕೆ 'ನಾನು ನಿನ್ನನ್ನು ತುಂಬ ಪ್ರೀತಿಸುತ್ತೇನೆ' ರಾಜಕುಮಾರ ಉತ್ತರಿಸಿದ. ದೋರಾಣಿ ಸಂಜೆ ತನ್ನ ಪಲ್ಲಕ್ಕಿಗೆ ಕಾಲಿಡುತ್ತ, ರಾಜಕುಮಾರನಿಗೆ 'ನೀವು ನನ್ನನ್ನು ಪ್ರೀತಿಸುತ್ತಿದ್ದರೆ, ಇಂದು ರಾತ್ರಿ ನನ್ನನ್ನು ಅನುಸರಿಸಬಾರದು' ಹೇಳಿದಳು. ರಾಜಕುಮಾರ ಅವಳ ಇಚ್ಛೆಯಂತೆ ಮನೆಯಲ್ಲಿಯೇ ಉಳಿದ.

ಅಂದು ದೋರಾಣಿ ಇಂದ್ರಸಭೆಯಲ್ಲಿ ಅದ್ಭುತವಾಗಿ ಹಾಡಿ, ನೃತ್ಯ ಮಾಡಿದಳು. ಇಂದ್ರನು ಎದ್ದುಬಂದು, 'ನಿನಗೆ ಇಷ್ಟವಾದುದನ್ನು ಕೇಳಬಹುದು. ಅದನ್ನು ಕೊಡುತ್ತೇನೆ' ಎಂದನು. 'ನೀವು ಕೊಡುವುದಾದರೆ ನಾನು ಮಾಂತ್ರಿಕ ವೀಣೆಯನ್ನು ಕೇಳುತ್ತೇನೆ' ಎಂದಳು ದೋರಾಣಿ. ಇದನ್ನು ಕೇಳಿದ ಇಂದ್ರನು, 'ನಾನು ನುಡಿಸುವ ಮಾಂತ್ರಿಕ ವೀಣೆ ನನ್ನ ಎಲ್ಲಾ ಆಸ್ತಿಗಳಿಗಿಂತ ಹೆಚ್ಚು ಮೌಲ್ಯಯುತವಾಗಿದೆ. ಅದನ್ನೇ ಕೇಳಿಬಿಟ್ಟೆಯಲ್ಲ! ಭರವಸೆ ನೀಡಿದಂತೆ ಕೊಟ್ಟುಬಿಡುತ್ತೇನೆ. ಆದರೆ ನೀನು ಮತ್ತೆ ಎಂದಿಗೂ ಹಿಂತಿರುಗಬಾರದು. ಶಾಪಗ್ರಸ್ಥೆಯಾಗಿ ಭೂಮಿಯಲ್ಲಿರುವ ವ್ಯಾಪಾರಿಯ ಮಗಳಾಗಿ ಜನಿಸಿದ ನೀನು ಒಬ್ಬ ಅಪ್ಸರೆ. ನಿನ್ನ ಮೇಲೆ ನನಗೆ ಅತಿಶಯ ಪ್ರೀತಿಯಿದ್ದ ಕಾರಣ ನಿನಗೆ ರಾತ್ರಿ ಇಲ್ಲಿಗೆ ಬರಲು ಅವಕಾಶ ನೀಡಿದ್ದೆ. ಮಾಂತ್ರಿಕ ವೀಣೆ ನಿನಗೆ ಬೇಡವೆನ್ನುವೆಯಾದರೆ ಮುಂದೆಯೂ ಇಲ್ಲಿಗೆ ಬರಬಹುದು' ಎಂದು ಹೇಳಿದ.

'ನನಗೆ ಈ ಇಂದ್ರಲೋಕಕ್ಕಿಂತಲೂ ಶ್ರೇಷ್ಠವಾದ ಅತಿಶಯ ಪ್ರೀತಿ ನೀಡುವ ರಾಜಕುಮಾರ ಅಲ್ಲಿರುವಾಗ ಕೋರಿಕೆಯನ್ನು ಬದಲಾಯಿಸಲಾರೆ. ಭೂಮಿಯಲ್ಲೇ ಇರುತ್ತೇನೆ' ಎಂದಳು ದೋರಾಣಿ. ಇಂದ್ರನು ನೀಡಿದ ವೀಣೆಯೊಂದಿಗೆ ಅವಳು ಭೂಮಿಗಿಳಿದು ರಾಜಕುಮಾರನ ಬಳಿಗೆ ಬಂದಳು. ರಾಜಕುಮಾರ ಅವಳ ಹತ್ತಿರ ಬಂದು ಮೆಲ್ಲನೆ, 'ಇವತ್ತು ರಾತ್ರಿ ನಿನ್ನ ಮನೆಗೆ ವಾಪಸ್ಸು ಹೋಗುತ್ತೀಯಾ ದೋರಾಣಿ?' ಕೇಳಿದ. 'ಇಲ್ಲ, ಇನ್ನು ಎಂದಿಗೂ ಇಲ್ಲ, ಇನ್ನು ಮುಂದೆ ನಾನು ನಿನ್ನನ್ನು ಬಿಡುವುದಿಲ್ಲ!' ಎಂದು ಹೇಳಿದಳು. ■

## ಕುಂಚ ಪ್ರಪಂಚ





**ಹರ್ಷ ಎ.ಎಸ್.**
4ನೇ ತರಗತಿ,
ಪೋದ್ದಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಶಿವಮೊಗ್ಗ

# ಮಳೆಗಾಳಿ

■ **ಕರವೀರಪ್ರಭು ಕ್ಯಾಲಕೊಂಡ**
ಕಲೆ: ಸಂತೋಷ ಸಸಿಹಿತ್ಲು

ಮೋಡವು ಮುಸುಕಿದ ಸಂಜೆಯ ಸಮಯದಿ
ಒಮ್ಮೆಲೆ ಎದ್ದಿತು ಗಾಳಿ
ಗಿರಿಗಿರಿ ಗಿರಿಗಿರಿ ತಿರುಗಲು ಗಾಳಿಯು
ಮುಗಿಲನು ಮುಟ್ಟಿತು ದೂಳು

ತೆಂಗಿನ ಕಂಗಿನ ತಾಳೆಯ ಬಾಳೆಯ
ಎಲೆಗಳು ತೂಗಿವೆ ಬಾಗಿ
ಹಾರಿತು ಹುಲ್ಲು ಮಾಳಿಗೆ ಹಂಚು
ಗಾಳಿಯು ಬೀಸಲು ಸಾಗಿ

ಮಡ್ಡಿಗೆ ಮೇಯಲು ಹೋದ ಹಸುಗಳು
ಓಡುತ ಬಂದವು ಕಂಗೆಟ್ಟು
ಕಣ್ಣ ಮುಂದಿನದೆ ಕಾಣದಾಯಿತು
ಎಲ್ಲೆಡೆ ದಟ್ಟನ ದೂಳಿಟ್ಟು

ಇದನು ನೋಡುತ ಅವಸರದೋಡಿತು
ಜನತೆ ತಮ್ಮಯ ಮನೆಯತ್ತ
ಗುಡುಗುಡು ಮುತ್ತ್ಯಾ ಗುಡುಗಲು ಗುಡುಗಿ
ಮಳೆಯನು ಸುರಿಸಿದ ಮಿಂಚುತ್ತ

